**ದಿನಾಂಕ: 23-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು:** ಪ್ರತಿವಾದಿ ಪರ ಶ್ರೀ ಜಿ ಎನ್ ಸಿ **ವಕೀಲರಿಂದ**

ದಾವ ಸ್ವತ್ತಿನ ಎ ಷೆಡೂ್ಯಲ್ ಸ್ವತ್ತನ್ನು ಶ್ರೀಮತಿ ಶಾಯಿನಾ ಖಾನಂ ರವರಿಂದ ಖರೀದಿಸಿರುತ್ತೇನೆ. ಶ್ರೀಮತಿ ಶಾಯಿನಾ ಖಾನಂ ರವರಿಂದ ಖರೀದಿಸಿದ ಸ್ವತ್ತು 20 ಇಂಟು 80 ಇರುತ್ತದೆ. ನೀವು ಸದರಿ ಶ್ರೀಮತಿ ಶಾಯಿನಾ ಖಾನಂ ರವರಿಂದ ಪಡೆದ ಕ್ರಯದ ಪತ್ರದಲ್ಲಿ ಸ್ವತ್ತಿನ ಅಳತೆ 20 ಇಂಟು 60 ಇದೆ ಎಂದರೆ ಸರಿ. ದಾವ ಸ್ವತ್ತಿನ ಬಿ ಷೆಡ್ಯೂಲ್ ಸ್ವತ್ತು ಎ ಷೆಡ್ಯೂಲ್ ಸ್ವತ್ತಿಗೆ ಹೊಂದಿಕೊಂಡಿದ್ದು, ಅದನ್ನು ಸಹ ಕ್ರಯಕ್ಕೆ ಪಡೆದಿರುತ್ತಿರಾ ಎಂಬುದಕ್ಕೆ ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿರುತ್ತಿರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ, ಸಾಕ್ಷಿ ಮುಂದುವರಿದು ರೆಜೂಲೂಷನ್ ನ್ನು ಹಾಜರುಪಡಿಸಿರುತ್ತೇನೆಂದು ನುಡಿದಿರುತ್ತಾರೆ. ದಾವ ಬಿ ಷೆಡ್ಯೂಲ್ ಸ್ವತ್ತನ್ನು ನೀವು ಖರೀದಿಸಿರುವ ಬಗ್ಗೆ ಯಾವುದಾದರೂ ಮೂಲ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆಂದು ನುಡಿದಿರುತ್ತಾರೆ.

ನಾನು ಖರೀದಿಸಿದ ದಾವ ಸ್ವತ್ತಿನ ಮಾಲೀಕರ ಹಿಂದಿನ ಮಾಲೀಕರಿಗೆ ಚೀಪ್ ಆಫೀಸರ್ ರವರು ಹರಾಜಿನಲ್ಲಿ ನೀಡಿದ ರಿಜಿಸ್ಟರ್ ಪತ್ರವನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ದಾವ ಬಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಮೂಲ ದಾಖಲೆಯನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದಾವ ಬಿ ಷೆಡ್ಯೂಲ್ ಸ್ವತ್ತಿನ ವಿವರದ ಬಗ್ಗೆ ಜಗನ್ನಾಥ್ ರವರಿಗೆ ಪುರಸಭೆಯವರು ನೀಡಿದ ರೆಜುಲೂಷನ್ ರದ್ದಾಗಿದೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ಜಗನ್ನಾಥ್ ರವರಿಂದ ಪುರಸಭೆಯವರು ಪಡೆದ 8,800/- ಹಣವನ್ನು ಸಹ ಅವರಿಗೆ ವಾಪಾಸ್ಸುಹೆಚ್ ಡಿ ಎಫ್ ಸಿ ಬ್ಯಾಂಕಿನ ಮುಖಾಂತರ ನೀಡಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಸದರಿ ಹಣವನ್ನು ವಾಪಾಸ್ಸು ಮಾಡಲು ಸ್ವತಃ ಜಗನ್ನಾಥ್ ರೈ ರವರೇ ಅರ್ಜಿ ಸಲ್ಲಿಸಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಸಾಕ್ಷಿ ಮುಂದುವರಿದು ಆ ಸಮಯದಲ್ಲಿ ಅವರು ಜೀವಂತವಾಗಿರಲಿಲ್ಲ ಎಂದು ನುಡಿದಿರುತ್ತಾರೆ. ದಾವ ಬಿ ಷೆಡ್ಯೂಲ್ ಸ್ವತ್ತಿನ ಬಗ್ಗೆ ಡಿಸಿ ಕಛೇರಿಯಲ್ಲಿ ಒಂದು ಆದೇಶ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು

ನುಡಿದಿರುತ್ತಾರೆ. ಡಿಸಿ ಕಛೇರಿಯ ಆದೇಶದ ಮೇರೆಗೆ ಪೀಫ್ ಆಫೀಸರ್ ರವರು ಜಗನಾಥ್ ರವರಿಗೆ ನೀಡಿದ ಆದೇಶವನ್ನು ರದ್ದು ಮಾಡಿದ್ದು, ಹಣವನ್ನು ಸಹ ನೀಡಿರುತ್ತಾರೆಂರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ, ಡಿಸಿ ಕಛೇರಿಯಲ್ಲಿ ದಾವ ಬಿ ಷೆಡ್ಯೂಲ್ ಸ್ವತ್ತು ಪ್ರತಿವಾದಿಯ ತಂದೆ ಶಾಂತಪ್ಪನವರ ಹೆಸರಿನಲ್ಲಿ ಖಾತೆ ಇದ್ದು, ಅವರ ಹೆಸರಿನಲ್ಲಿ ಮುಂದುವರಿಯಬೇಕೆಂದು ಆದೇಶ ಇದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಸದರಿ ಡಿಸಿ ಕಛೇರಿಯ ಆದೇಶದ ಪ್ರಕಾರ ದಾವ ಬಿ ಷೆಡ್ಯೂಲ್ ಸ್ವತ್ತು ಶಾಂತಪ್ಪನವರಿಗೆ ಸೇರಿದ್ದು ಎಂಬುದಾಗಿ ಅವರಿಂದ ರೂ.72,080/- ರೂಪಾಯಿಗಳನ್ನು ಪುರಸಭೆಯವರು ಪಡೆದಿರುತ್ತಾರೆಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ. ಡಿಸಿ ಕಛೇರಿಯ ಆದೇಶದ ಸಂ. ಎಂ ಯು ಎನ್ 17/2001-02, ದಿ: 21-06-2002 ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಡಿಸಿ ರವರ ಆದೇಶದ ಪ್ರಕಾರ ದಾವ ಬಿ ಷೆಡ್ಯೂಲ್ ಸ್ವತ್ತು ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಮುಂದುವರಿದಿದ್ದು ಈಗಲೂ ಸಹ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿರುತ್ತಾರೆ.

ದಾವ ಬಿ ಷೆಡ್ಯೂಲ್ ಸ್ವತ್ತನ್ನು ಪ್ರತಿವಾದಿಯ ತಂದೆ ನೋಂದಣಿ ದಾನ ಪತ್ರ ಮಾಡಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾನ ಪತ್ರದಲ್ಲಿ ಬಿ ಷೆಡ್ಯೂಲ್ ಸ್ವತ್ತು ಸೇರಿ ಅಳತೆ 20 ಇಂಟು 100 ಇರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಯು ಶ್ರೀಮತಿ ಶಾಯಿನಾ ಖಾನಂ ರವರು ಪ್ರತಿವಾದಿಯ ಮೇಲೆ ಇದೇ ನ್ಯಾಯಾಲಯದಲ್ಲಿ ಅಸಲು ದಾವ ಸಂಖ್ಯೆ 342/2015 ಹಾಕಿದ್ದರು ಎಂದರೆ ಸಾಕ್ಷಿ ಸದರಿ ದಾವೆಯು ನನಗೆ ದಾವ ಸ್ವತ್ತನ್ನು ಮಾರುವ ಮುಂಚೆ ಹೂಡಿರುತ್ತಾರೆ, ಅದರ ಬಗ್ಗೆ ನನಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆ ಇದೇ ನ್ಯಾಯಾಲಯದಲ್ಲಿ ವಜಾ ಆಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವ ಬಿ ಷೆಡ್ಯೂಲ್ ಸ್ವತ್ತಿನ ಮೇಲೆ ನಿಮಗೆ ಯಾವುದೇ ಹಕ್ಕು, ಭಾದ್ಯತೆ, ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಹೆಸರಿನಲ್ಲಿರುವ ಬಿ ಷೆಡ್ಯೂಲ್ ಸ್ವತ್ತನ್ನು ಲಪಾಟಯಿಸಲು ನೀವು ಈ ಸುಳ್ಳು ದಾವೆ ಹೂಡಿರುತ್ತಿರಾ ಎಂದರೆ

ಸರಿಯಲ್ಲ. ಪುರಸಭೆಯಿಂದ ಆದ ರೆಜುಲೂಷನ್ ರದ್ದಾಗಿದೆ ಎಂದರೆ ಸಾಕ್ಷಿ ಜಗನ್ನಾಥ್ ರೈ ರವರು ಮರಣ ಹೊಂದಿದ ನಂತರ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಿಪಿ-6 ರಿಂದ 12 ಪೋಟೋಗಳು ಮತುತ ನಿಪಿ-13 ಸಿಡಿಯನ್ನು ಈ ದಾವೆಗೋಸ್ಕರ ಸೃಷ್ಠಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ರಮೇಶ್ ಎಂಬುವವರು ತರೀಕೆರೆಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವ ಸಂ.134/2019 ದಾವೆಯಲ್ಲಿ ವಿಭಾಗಕ್ಕಾಗಿ ಪ್ರತಿವಾದಿಯ ಮೇಲೆ ದಾವೆ ಹೂಡಿರುತ್ತಾರೆಂದರೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲೂ ಸಹ ಬಿ ಷೆಡ್ಯೂಲ್ ಸ್ವತ್ತು ಪ್ರತಿವಾದಿಯರಿಗೆ ಸೇರಿರುತ್ತದೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

Sd/-
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**